**ನೆಲಮಂಗಲ ಟೌನಿನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಔಷಧಿ ಬಿಡುಗಡೆ**

714 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ನೆಲಮಂಗಲ ಟೌನ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಔಷಧಿಗಾಗಿ 1988 ರಿಂದ 1991ರ ವರೆಗೆ ಎಷ್ಟು ಹಣ ಬಿಡುಗಡೆ ಆಗಿದೆ.*

*ಆ) ರೋಗಿಗಳು ಮತ್ತು ಗಾಯಾಳುಗಳು ಮೇಲ್ಕಂಡ ಆಸ್ಪತ್ರೆಗೆ ಅಧಿಕವಾಗಿ ಬರುತ್ತಿರುವುದರಿಂದ ಔಷಧಿ ಸಾಮಗ್ರಿಗಳು ಬಹಳ ಕಡಿಮೆ ಆಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು) :

ಅ) 1988-89ನೇ ಸಾಲಿಗೆ

ಆಯವ್ಯಯ ಇಲ್ಲ ಆದದ್ದು

ಔಷಧಿ ಪೂರೈಕೆ ರೂ. 40,51-40

1989 - 90ನೇ ಸಾಲಿಗೆ

ಆಯವ್ಯಯ ಇಲ್ಲ ಆದರೂ ಔಷಧಿ

ಪೂರೈಕೆ - ರೂ. 49,578-69

ದಂತ ಚಿಕಿತ್ಸಾಲಯಕ್ಕೆ 496-17

ಒಟ್ಟು ರೂ. 50,074-86

1990 - 91 ನೇ ಸಾಲಿಗೆ

ಆಯವ್ಯಯ ಇಲ್ಲ ಆದರೂ ಔಷಧಿ

ಪೂರೈಕೆ ರೂ. 41,917-07

ದಂತ ಚಿಕಿತ್ಸಾಲಯಕ್ಕೆ 5,899-83

ಒಟ್ಟು ರೂ. 47,816-90

ಆ) ಬಂದಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ನಮ್ಮ ನೆಲಮಂಗಲ ಟೌನ್ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಗೆ ಸೇರಿದೆ. ಆ ರಸ್ತೆಯಲ್ಲಿ ರಾಜ್ಯದ ಸುಮಾರು 75 ಪರ್‌ಸೆಂಟ್ ಬಸ್‌ಗಳು ವಾಹನಗಳು ಓಡಾಡುತ್ತವೆ. ಅಲ್ಲಿ ದಿನನಿತ್ಯ ಹತ್ತಾರು ಅಪಘಾತಗಳು ಆಗುತ್ತಿವೆ. ಹತ್ತಾರು ಸಾವುನೋವುಗಳು ಕೂಡಾ ಆಗುತ್ತಿವೆ. ಅಲ್ಲಿ ಒಂದು ಜನರಲ್ ಆಸ್ಪತ್ರೆಯಾಗಬೇಕು. ಎಂದು ನಾನು ಅನೇಕ ಮನವಿಗಳನ್ನು ಕೊಟ್ಟಿದ್ದೇನೆ. ಆದರೆ ದುರಾದೃಷ್ಟವೆಂದರೆ—

ಅಧ್ಯಕ್ಷರು : ಅದು ಸರಿ. ತಾವು ಈಗ ಔಷಧಿ ಬಗ್ಗೆ ಮಾತನಾಡ, ಆಮೇಲೆ ಜನರಲ್ ಆಸ್ಪತ್ರೆ ಬಗ್ಗೆ ಮಾತನಾಡಿ.

ಶ್ರೀ ಅಂಜನಮೂರ್ತಿ : ಈಗ ಅದೇ ಹೇಳುತ್ತಿದ್ದೇನೆ.

ಅಧ್ಯಕ್ಷರು : ಫಸ್ಟ್ ಔಷಧಿ ಬಿಡಿಸಿ.

ಶ್ರೀ ಅಂಜನಮೂರ್ತಿ : ಈಗ ಔಷಧಿಗೆ ಬರುತ್ತಿದ್ದೇನೆ. ಅಲ್ಲಿ ದುರದೃಷ್ಟ ಏನಾಗಿದೆ ಎಂದರೆ ಜನ ಸತ್ತಷ್ಟು ಭಾರ ಕಡಿಮೆಯಾಗುತ್ತದೆ ಎಂದು ಸರ್ಕಾರದವರು

ತಿಳಿದುಕೊಂಡಿದ್ದಾರೆ ಎನಿಸುತ್ತದೆ. ಆದರೆ ಕಳೆದ ಸಾರಿ ಇದ್ದಂಥ ಮಾನ್ಯ ಮುಖ್ಯಮಂತ್ರಿಗಳು ಮತ್ತು ಈಗಿನ ಆರೋಗ್ಯ ಮಮಂತ್ರಿಗಳು ಒಂದು ಆದೇಶವನ್ನು ಇವರ ಬಗ್ಗೆ ಹೊರಡಿಸಿದರು. ಅದಷ್ಟು ಜಾಗ್ರತೆ ಒಂದು ಜನರಲ್ ಆಸ್ಪತ್ರೆಯನ್ನು ಮಾಡಿ ಕೊಡಬೇಕು ಎಂದು ಹೇಳಿದ್ದರು.ಇಲ್ಲಿಯವರೆಗೂ ಕೂಡಾ ಅಧಿಕಾರಿಗಳು ಯಾವ ಕ್ರಮವನ್ನು ಇವರ ಬಗ್ಗೆ ತೆಗೆದುಕೊಂಡಿಲ್ಲ. ಕಳೆದ ಸಾರಿ ನಾನು ಇದೇ ಸದನದಲ್ಲಿ ಪ್ರಶ್ನೆ ಕೇಳಿದಾಗ ನಮ್ಮ ನೆಲಮಂಗಲ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಯಲ್ಲಿ ಸುಮಾರು 400 ಜನ ಸತ್ತಿದ್ದಾರೆ, 900 ಜನರಿಗೆ ಗಾಯಗಳಾಗಿವೆ ಎಂದು ಹೇಳಿದ್ದಾರೆ. ಈಗ ಔಷಧಿ ಬಗ್ಗೆ ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೆಚ್ಚಿನ ಔಷಧಿಯನ್ನು ಒದಗಿಸುವುದಕ್ಕೆ ಸರ್ವಜನಿಕರಿಂದ ಏನೂ ದೂರುಗಳು ಬಂದಿಲ್ಲ ಎಂದು ಹೇಳಿದ್ದಾರೆ. ಕಳೆದ ಸಾರಿ ಸರ್ಕಾರದವರೇ ಎಷ್ಟೊಂದು ಸಾವು ನೋವುಗಳು ಆಗಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ರೀತಿ ಅವರೇ ಉತ್ತರ ಕೊಟ್ಟಿರುವುದರಿಂದ ಸಾರ್ವಜನಿಕರಿಂದ ದೂರಗಳು ಬರಬೇಕಾಗಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಇಲ್ಲಿ ಔಷಧಿಗಳನ್ನು ಸಮನಾಗಿ ಹಂಚುವುದಕ್ಕೆ ಹೋಗುತ್ತಾರೆ. ಆದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚಿನ ಸಾವು ನೋವುಗಳು, ಅಪಘಾತಗಳು ಆಗುವುದರಿಂದ ಅಲ್ಲಿಗೆ ಹೆಚ್ಚಿನ ಔಷಧವನ್ನು ಬಿಡುಗಡೆ ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಆರೋಗ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಉತ್ತರ ಇಲ್ಲ)

**ಪರೀಕ್ಷೆ ವೇಳೆಯಲ್ಲಿ ವಿದ್ಯಾರ್ಥಿಗಳ ಪ್ರವಾಸ**

6 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಹಾಗೂ ಕಾಲೇಜುಗಳ ವಿದ್ಯಾರ್ಥಿಗಳನ್ನು ಡಿಸೆಂಬರ್ ತಿಂಗಳ ನಂತರ ರಾಜ್ಯದ ಒಳಗೆ ಅಥವಾ ಹೊರಗೆ ಪ್ರವಾಸ ಮಾಡುವುದನ್ನು ತಪ್ಪಿಸುವ ಮಾಡುವುದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಕ್ರಮವನ್ನೇನಾದರೂ ಕೈಗೊಂಡಿರುವರೇ?*

*ಆ) ಹಾಗಿಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಅಭ್ಯಾಸದ ಹಾಗೂ ಪರೀಕ್ಷೆಗಳಮೇಲೆ ಆಗುವ ಪರಿಣಮವನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮವೇನು?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು):

ಅ) ಇಲ್ಲ.

ಆ) ವಿದ್ಯಾರ್ಥಿಗಳ ಅಭ್ಯಾಸ ಮತ್ತು ಪರೀಕ್ಷೆಗಳಮೇಲೆ ಯಾವ ಪರಿಣಾಮವು ಬೀರುವುದಿಲ್ಲವಾದ್ದರಿಂದ ಯಾವ ಕ್ರಮವು ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಪ್ರವಾಸದಿಂದ ಮಕ್ಕಳ ವಿದ್ಯಾಭ್ಯಾಸದ ಮೇಲೆ ಆಗುವಂಥ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ಪರೀಕ್ಷೆ ಸಮೀಪ ಬಂದಾಗ ಇವರ ಟೂರ್ ಪ್ರಾರಂಭವಾಗುತ್ತದೆ. ನಮ್ಮ ಊರಿನಲ್ಲಿ ಒಂದು ಪ್ರೈಮರಿ ಸ್ಕೂಲ್ ಟೂರ್ ಮುಗಿದಮೇಲೆ ಇನ್ನೊಂದು ಪ್ರೈಮರಿ ಸ್ಕೂಲ್ ಟೂರ್ ಪ್ರಾರಂಭವಾಗುತ್ತದೆ. ನಂತರ ಹೈಸ್ಕೂಲ್ ಟೂರ್, ಆಮೇಲೆ ಕಾಲೇಜ್ ಟೂರ್. ಈ ರೀತಿಯಲ್ಲಿ ಟೂರ್ ಮಾಡುವುದರಿಂದ ವಿದ್ಯಾರ್ಥಿಗಳ ಅಭ್ಯಾಸದ ಮೇಲೆ ವಿಪರೀತವಾದ ಪರಿಣಾಮವನ್ನು ಉಂಟುಮಾಡುತ್ತಿದೆ. ಕಡೆಯ ಪಕ್ಷ ಜನವರಿ ನಂತರ ಟೂರ್ ಮಾಡಬಾರದು ಎಂಬ ಬ್ಯಾನ್ ಹಾಕದೇಹೋದರೆ, ವಿದ್ಯಾರ್ಥಿಗಳು ಟೂರ್ ಮುಗಿಸಿಕೊಂಡು ಬಂದು ಪರೀಕ್ಷೆಗಳನ್ನು ಮುಂದೂಡಬೇಕೆಂದು ಝಂಡಾಹಿಡಿದು ನಿಲ್ಲುವ